<u>1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ</u>

<u>ಸಿಸಿ ನಂ:90/2017</u>

ಪಿಡಬ್ಲ್ಯೂ: 5 ಸಿಡಬ್ಲ್ಯೂ: 8

ಸಾಕ್ಷಿಯನ್ನು ತಾ:- **05.04.2021** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ದೇವರಾಜು |
| ತಂದೆಯ ಹೆಸರು | ನಿಂಗಯ್ಯ ಅಲಿಯಾಸ್ ಮೊಳ್ಳಯ್ಯ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಜಯಚಾಮರಾಜಪುರ, ಮಳವಳ್ಳಿ ತಾಲ್ಲೂಕು. |

**<u>ಮುಖ್ಯ ವಿಚಾರಣೆ: ಶ್ರೀ ಸ ಸ ಅರವರಿಂದ.</u>**

1. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಅಮಾನತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-3 ಸಿ ಎಂದು ಗುರುತಿಸಲಾಯಿತು.

2. ಇಲ್ಲಿಗೆ 5 ವರ್ಷಗಳ ಹಿಂದೆ ಪೋಲೀಸರು ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ಚಾಸಾ-1 ರವರ ವಾಹನ ಅಪಘಾತವಾಗಿದ್ದ ವಿಚಾರವಾಗಿ ನನ್ನ ಸಹಿ ಪಡೆದುಕೊಂಡರು. ವಶಪಡೆದುಕೊಳ್ಳುವ ಸಮಯದಲ್ಲಿ ಪೊಲೀಸರನ್ನು ಬಿಟ್ಟು ಇತರರು ಅಲ್ಲಿ ಇದ್ದರು. ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಅಮಾನತು ಮಹಜರನ್ನು ಜರುಗಿಸಿರುತ್ತಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಅಮಾನತು ಮಹಜರ್ ವಿರುದ್ದ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)

**<u>ಪಾಟೀಸವಾಲು: ಶ್ರೀಮತಿ ಸ.ಸ.ಅರವರಿಂದ:</u>**

3. ದಿನಾಂಕ 30-04-2016 ರಂದು ಚಾಸಾ-1 ರವರು ಕೆ.ಎ.11-ಇಇ-5614 ಸಂಖ್ಯೆಯ ಸುಜುಕಿ ಹಾಯಾಟೆ ಮೋಟಾರ್ ಸೈಕಲನ್ನು ಹಾಜರುಪಡಿಸಿದಾಗ ಅದನ್ನು ಪೋಲೀಸರು ವಶಕ್ಕೆ ಪಡೆದುಕೊಂಡು ಬೆಳಿಗ್ಗೆ 9-00 ಗಂಟೆಯಿಂದ 10-00 ಗಂಟೆಯವರೆಗೆ ನನ್ನ ಸಮಕ್ಷಮ ನಿ.ಪಿ-3 ರ ಪ್ರಕಾರ ಮಹಜರ್ ಮಾಡಿದರು ಎಂದರೆ ಸರಿ. ಆಗ ಹಾಜರಿದ್ದ ನಾನು ನಿ.ಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ</u>**

4. ವಾಹನವನ್ನು ವಶಕ್ಕೆ ಪಡೆದುಕೊಂಡಿರುವ ಜಾಗದ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ . ವಶಕ್ಕೆ ಪಡೆದುಕೊಂಡಿರುವ ಬೈಕು ಯಾವ ಕಂಪನಿದು ಹಾಗೂ ವಾಹನ ಸಂಖ್ಯೆ ಯಾವುದು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ . ನಾನು ಪೊಲಿಸ್ ಸ್ಟೇಷನ್ ಹೋಗಿದ ದಿನಾಂಕ ಹಾಗೂ ವರ್ಷ ಹೇಳಲು ಬರುವುದಿಲ್ಲ ಎಂದರೆ ಸರಿ . ನಾನು ಎರಡು ಪೊಲಿಸ್ ಠಾಣೆಯಲ್ಲಿ ಮಳವಳ್ಳಿ ಗ್ರಾಮಾಂತರ ಪೊಲಿಸ್ ಸ್ಟೇಶನಿಗೆ ಹೋಗಿರುತ್ತೇನೆ. ನಿಪಿ 3 ರ ಮೇಲೆ ನನ್ನ ಸಹಿ ಯಾರು ಪಡೆದುಕೊಂಡಿರುತ್ತಾರೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ . ನಿಪಿ 3 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ . ನನ್ನನ್ನು ಹೊರತುಪಡಿಸಿ ಬೇರೆ ಯಾರು ನಿಪಿ 3 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನೆಗೆ ಹೇಳಲು ಬರುವುದಿಲ್ಲ. ವಾಹನ ವಶಕ್ಕೆ ಪಡೆದುಕೊಂಡಿರುವುದು ನಾನು ಖುದ್ದಾಗಿ ನೋಡಿರುವುದಿಲ್ಲ. ಚಾಸ 1 ರವರಿಗೆ ಅನುಕೂಲವಾಗುವ ರೀತಿಯಲ್ಲಿ ಅವರ ಸುಳ್ಳು ದೂರಿಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತು ಕೂಡ ಚಾಸ 1 ರವರು ನನಗೆ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನಗೆ ನ್ಯಾಯಾಲಯದಿಂದ ಸಮನ್ಸ ಬಂದ ನಂತರ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುತ್ತಾರೆ. ಚಾಸ 1 ರವರರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಅವರ ಜೊತೆಯಲ್ಲಿ ಇವತ್ತು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರಿದು ಸಮನ್ಸ ಬಂದ ನಂತರ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುತ್ತಾರೆ.

**ಮರು ವಿಚಾರಣೆ:- ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

(ಐಶ್ವರ್ಯ ಚಿದಾನಂದ ಪಟ್ಟಣ್ ಶೆಟ್ಟಿ)
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ